[Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1101/2024**

ಸಾಕ್ಷಿದಾರನ ಹೆಸರು ಃ ಘನಶ್ಯಾಮ ನಾಯಕ್ ಪಿ.ಡಬ್ಲ್ಯೂಃ 2

ತಂದೆಯ ಹೆಸರುಃ ವೆಂಕಟಿ ನಾಯಕ್ ಸಿ.ಡಬ್ಲ್ಯೂಃ 3

ಪ್ರಾಯ ಃ 36 ವರ್ಷ

ಉದ್ಯೋಗ ಃ ಪೊಲೀಸ್ ಪೇದೆ, ಕುಂದಾಪುರ ಠಾಣೆ

ವಾಸ ಃ ಕುಂದಾಪುರ

ದಿನಾಂಕ 08-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು 2015 ರಿಂದ 2024 ರವರೆಗೆ ಕಾರ್ಕಳ ನಗರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 27-01-2024 ರಂದು ಬೆಳಿಗ್ಗೆ 6.30 ಗಂಟೆಗೆ ಕಾರ್ಕಳ ತಾಲೂಕು, ಕುಕ್ಕುಂದೂರು ಗ್ರಾಮದ ಜಯಂತಿ ನಗರ ಬಳಿ ಚಾಸಾ-1 ಮತ್ತು 2 ರವರೊಂದಿಗೆ , ನಾನು ಇಲಾಖಾ ಜೀಪಿನಲ್ಲಿ ರೌಂಡ್ಸ ಕರ್ತವ್ಯದಲ್ಲಿದ್ದು ವಾಹನ ತಪಾಸಣೆ ಮಾಡುತ್ತಿರುವಾಗ ಪುಲ್ಕೇರಿ ಬೈಪಾಸ್ ಕಡೆಯಿಂದ ಬಂಗ್ಲೆಗುಡ್ಡೆ ಟಿಪ್ಪರ್ ವಾಹನ ಬರುತ್ತಿದ್ದು, ಟಿಪ್ಪರ್ ವಾಹನವನ್ನು ನಿಲ್ಲಿಸಲು ಚಾಸಾ-1 ರವರು ಸೂಚನೆ ನೀಡಿದ್ದು ಅದರ ಚಾಲಕನು ಟಿಪ್ಪರ್ ಅನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಚಾಲಕನು ಓಡಿ ಹೋಗಿರುತ್ತಾನೆ. ಟಿಪ್ಪರ್ ಒಳಗಿದ್ದ ಇನ್ನೊಬ್ಬ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ನೂರ್ ಮೊಹಮ್ಮದ್, ಕಾರಲ್ ಗುಡ್ಡೆ, ಮಿಯಾರು ಎಂದು ತಿಳಿಸಿದ್ದು, ಸದರಿ ವಾಹನವನ್ನು ಪರಿಶೀಲಿಸಿದಾಗ ಸದರಿ ವಾಹನದಲ್ಲಿ ಸುಮಾರು 3 ಯುನಿಟ್ ಮರಳು ತುಂಬಿರುವ ಬಗ್ಗೆ ಕಂಡು ಬಂದಿರುತ್ತದೆ. ಸದರಿ

ಲಾರಿಯಲ್ಲಿದ್ದ 1 ನೇ ಆರೋಪಿಯನ್ನು ಚಾಸಾ-1 ರವರು ಸದರಿ ಮರಳನ್ನು ಸಾಗಟ ಮಾಡಲು ಪರವಾನಿಗೆ ಇದೆಯಾ ಎಂದು ವಿಚಾರಿಸಲಾಗಿ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದ್ದು ಸದರಿ ಓಡಿ ಹೋದ ಚಾಲಕನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಮೊಹಮ್ಮದ್ ಆರೀಸ್ ಎಂಬುದಾಗಿ ತಿಳಿಸಿರುತ್ತಾನೆ. ಸದರಿ ಮರಳಿನ ಸಾಗಾಟ ಕುರಿತು 1 ನೇ ಆರೋಪಿ ಬಳಿ ವಿಚಾರಿಸಲಾಗಿ ಸದರಿ ಮರಳನ್ನು ಕಾರ್ಕಳ ತಾಲೂಕು, ಮಿಯಾರು ಗ್ರಾಮದ ಸರ್ಕಾರಿ ಹೊಳೆಯಿಂದ ಕಳ್ಳತನ ಮಾಡಿ ಲೋಡ್ ಮಾಡಿ ತೆಗೆದುಕೊಂಡು ಬಂದಿರುವ ಮರಳಾಗಿದ್ದು ಇದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಪರವಾನಿಗೆ ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾನೆ. ಸದರಿ ಲಾರಿ ನಂಬರ್ ಕೆಎ-42-ಎ-5031 ಆಗಿರುತ್ತದೆ. ನಂತರ ಚಾಸಾ-1 ರವರು ಸದರಿ ವಾಹನ ಹಾಗೂ ಮರಳನ್ನು ಸ್ವಾಧೀನಪಡಿಸಿಕೊಳ್ಳಲು ಚಾಸಾ 4 ಮತ್ತು 5 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರುಗಳ ಸಮಕ್ಷಮ ಸ್ಥಳದಲ್ಲಿ ಮಹಜರು ಮಾಡಿ, ಭಾವಚಿತ್ರ ತೆಗೆದಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ನಂತರ ಚಾಸಾ 4 ಮತ್ತು 5 ರವರ ಸಮಕ್ಷಮ ಮರಳು ಮತ್ತು ವಾಹನ ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ಠಾಣೆಗೆ ಬಂದು ಚಾಸಾ 11 ರವರಿಗೆ ಆರೋಪಿ, ಸ್ವತ್ತು ಮತ್ತು ಮಹಜರನ್ನು ಹಸ್ತಾಂತರಿಸಿರುತ್ತಾರೆ. ಘಟನೆ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಿಂದ 6 ಭಾವಚಿತ್ರ ನೋಡಿ ಗುರುತಿಸಿರುತ್ತಾರೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎ ಕೆ ಹೆಚ್ ವಕೀಲರಿಂದಃ

ನಮಗೆ ನಿರ್ದಿಷ್ಟ ಕರ್ತವ್ಯದ ಅವಧಿ ಇರುವುದಿಲ್ಲ. ತಕ್ಷೀರು ದಿನ ನನ್ನ ಕರ್ತವ್ಯದ ಅವಧಿಯನ್ನು ಬೆಳಗ್ಗೆ 6.30 ರಿಂದ ರಾತ್ರಿ 8.00 ಗಂಟೆಯವರೆಗೆ ತೋರಿಸಿರುತ್ತೇನೆ. ಚಾಸಾ-1 ರವರು ಕರೆದ ಮೇರೆಗೆ ಬಂದಿರುತ್ತೇನೆ. ನಾವು ಠಾಣೆಯನ್ನು ಬೆಳ್ಳಿಗ್ಗೆ 6.25 ಗಂಟೆಗೆ ಬಿಟ್ಟಿರುತ್ತೇವೆ. ಯಾವ ಕಾರಣಕ್ಕಾಗಿ ಚಾಸಾ-1 ರವರು ವಾಹನ ತಪಾಸಣೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ವಾಹನಗಳ ದಟ್ಟಣೆ ಹೆಚ್ಚು ಇದ್ದಾಗ ತಪಾಸಣೆ ಮಾಡುತ್ತೇವೆ ಎಂದರೆ ಮೇಲಾಧಿಕಾರಿಗಳ ಆದೇಶ ಇದ್ದಾಗಲೂ ಮಾಡುತ್ತೇವೆ. ಬೆಳಗ್ಗಿನ ಸಮಯದಲ್ಲಿ ವಾಹನಗಳು ವಿರಳವಾಗಿ ಸಂಚರಿಸುತ್ತವೆ ಎಂದರೆ ಸರಿ. ಸರ್ವಜ್ಞ ನಗರ ಸರ್ಕಲ್ ನಿಂದ ಜಯಂತಿ ನಗರಕ್ಕೆ 1 ಕಿ.ಮೀ ದೂರವಿದೆ. ತಕ್ಷೀರು ದಿನ ಸರ್ವಜ್ಞ ನಗರ ದಾಟಿ ಜಯಂತಿ ನಗರಕ್ಕೆ ಹೋಗಿರುತ್ತೇವೆ. ಎಷ್ಟು ವಾಹನ ತಪಾಸಣೆ ಮಾಡಿರುತ್ತೇವೆ ಎಂದು ನೆನಪಿಲ್ಲ. ಸಾಮಾನ್ಯ ರೀತಿಯಲ್ಲಿ ವಾಹನ ತಪಾಸಣೆ ಮಾಡಿರುತ್ತೇವೆ. ನಾನು ಚಾಲಕನ ಮತ್ತೊಂದು ಬದಿಯಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ವಾಹನವನ್ನು ನಾವು ಸೂಚನೆಕೊಟ್ಟ ಸ್ಥಳದಿಂದ 25 ಮೀಟರ್ ದೂರದಲ್ಲಿ ನಿಲ್ಲಿಸಿರುತ್ತಾರೆ. ನಮ್ಮ ಜೀಪನ್ನು ದಾಟಿ ಮುಂದೆ ನಿಲ್ಲಿಸಿರುತ್ತಾರೆ. ಆರೋಪಿ ಬಂಗ್ಲೆ ಗುಡ್ಡೆ ಕಡೆ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ತಿಸಿರುತ್ತೇವೆ ಸಾಧ್ಯವಾಗಿರಲಿಲ್ಲ. ಇನ್ನೊಬ್ಬ ಆರೋಪಿ ಸುಮ್ಮನೆ ನಿಂತಿದ್ದರು. ಕುಳಿತುಕೊಂಡಿದ್ದ ವ್ಯಕ್ತಿಯ ಹೆಸರು ನೂರ್ ಮಹಮ್ಮದ್. ಅವರನ್ನು ಚಾಸಾ-1 ರವರ ಬಳಿ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-1 ರವರು ಲಾರಿಯನ್ನು ಪರೀಕ್ಷಿಸಿರುತ್ತಾರೆ. ಆ ಸಮಯದಲ್ಲಿ ಲಾರಿಯಲ್ಲಿ ಮರಳು ಮಾತ್ರ ಇತ್ತು. ಆ ಸಮಯದಲ್ಲಿ ಮಹಜರನ್ನು ಚಾಸಾ-1 ರವರು ಮಾಡಿರುತ್ತಾರೆ. ಪಂಚರು ಯಾವ ಊರಿನವರು ಎಂದು ನನಗೆ ಗೊತ್ತಿರುವುದಿಲ್ಲ. ಮಹಜರ್ ಸಮಯದಲ್ಲಿ ಭಾವಚಿತ್ರ ತೆಗೆದಿರುತ್ತಾರೆ. ಚಾಸಾ-1 ರವರು ಅರ್ಧ ಗಂಟೆಯಲ್ಲಿ ಪಂಚರನ್ನು ಕರೆಸಿರುತ್ತಾರೆ. ಪಂಚರು ಬರುವವರೆಗೆ  ವಾಹನಗಳನ್ನು ಪರಿಶೀಲಿಸುತ್ತಿದ್ದೆವು. ತಕ್ಷೀರು ಸ್ಥಳದ ಸುತ್ತಮುತ್ತ ಎರಡು ಮನೆಗಳಿದ್ದವು. ತಕ್ಷೀರು ಸ್ಥಳದಲ್ಲಿ 10-20 ವಾಸದ ಮನೆಗಳಿದ್ದವು ಎಂದರೆ ಸರಿಯಲ್ಲ. ನಿಪಿ-3 ಭಾವಚಿತ್ರದಲ್ಲಿ ನಾನು ಹಾಗೂ ಚಾಸಾ-2 ಇರುವುದಿಲ್ಲ ಎಂದರೆ ಸರಿ. ನಿಪಿ-3 ಭಾವಚಿತ್ರದಲ್ಲಿ ಕಾಣುವ ಜಾಗ ರೆಸಿಡೆನ್ಸಿಯಲ್

ಅಪಾರ್ಟ್ ಮೆಂಟ್ ಎಂದರೆ ಸರಿ. ನಿಪಿ-3 ರಲ್ಲಿರುವ ಮನೆ ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನಿಪಿ-3 ಭಾವಚಿತ್ರದಲ್ಲಿ ಮರಳು ಇರುವುದು ಕಾಣಿಸುವುದಿಲ್ಲ ಎಂದರೆ ಸರಿ. ಇಲಾಖಾ ಜೀಪು ನಿಪಿ-3 ರಲ್ಲಿ ಕಾಣಿಸಿವುದಿಲ್ಲ. ತಕ್ಷೀರು ದಿನ ಚಾಸಾ-1 ರವರು ಆರೋಪಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಮೌಖಿಕವಾಗಿ ವಿಚಾರಣೆ ಮಾಡಿರುತ್ತಾರೆ. ನಾವು ಬೇರೆ ವಾಹನಗಳನ್ನು ಪರಿಶೀಲಿಸುತ್ತಿದ್ದೆವು. ಎಷ್ಟು ಎಂದು ನೆನಪಿಲ್ಲ. ಮಹಜರ್ ಸಮಯದಲ್ಲಿ ಜನರು ವಾಕಿಂಗ್ , ಹಾಲು, ತರಕಾರಿ ತೆಗೆದುಕೊಂಡು ಹೋಗುತ್ತಿದ್ದರು. ಲಾರಿಯನ್ನು ಠಾಣೆಗೆ ಯಾರು ಚಲಾಯಿಸಿಕೊಂಡು ಬಂದಿರುತ್ತಾರೆ ಎಂದು ನೆನಪಿಲ್ಲ. ಆರೋಪಿಯನ್ನು ಠಾಣೆಗೆ ನಮ್ಮ ಜೊತೆ ಕರೆದುಕೊಂಡು ಬಂದಿರುತ್ತೇವೆ. ಆರೋಪಿಯು ಲಾರಿಯಲ್ಲಿ ಕುಳಿತುಕೊಂಡಿದ್ದ. ಮಹಜರ್ ಸಾಕ್ಷಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿರುವುದಿಲ್ಲ.

ಲಾರಿಯಲ್ಲಿ 3 ಯೂನಿಟ್ ಮರಳು ಇತ್ತು ಎಂದು ಹಾಗೂ ಅದರ ಮೌಲ್ಯವನ್ನು ನೂರ್ ಮಹಮ್ಮದ್ ಹೇಳಿರುತ್ತಾರೆ. ಲಾರಿಯಲ್ಲಿದ್ದ ಮರಳು ಯಾವಾಗ ತೆಗೆಯಲಾಗಿತ್ತು ಎಂದು ಗೊತ್ತಿಲ್ಲ. ತಕ್ಷೀರು ದಿನ ಚಾಸಾ-1 ರವರು ಸ್ವಾಧೀನಪಡಿಸಿಕೊಂಡ ಲಾರಿಯನ್ನು ಹಾಗೂ 1 ನೇ ಆರೋಪಿಯನ್ನು ಚಾಸಾ-11 ರವರಿಗೆ ಹಸ್ತಾಂತರಿಸಿರುತ್ತಾರೆ. ಮರಳನ್ನು ತೆಗೆದ ಸ್ಥಳಕ್ಕೆ ನಾವು ಭೇಟಿ ಕೊಟ್ಟಿರುವುದಿಲ್ಲ. ನಾನು ತಕ್ಷೀರು ನಡೆದ ದಿನ ಆರೋಪಿತರಿಂದ ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತಕ್ಷೀರು ದಿನ ವಾಹನ ತಪಾಸಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-2 ಅನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ಠಾಣೆಗೆ ಬಂದ ಬಗ್ಗೆ ಹಾಗೂ ಹೋದ ಬಗ್ಗೆ ಸಮಯ ಹಾಗೂ ದಿನಾಂಕವನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇವೆ. ಸದರಿ ದಿನ ಮೇಲಾಧಿಕಾರಿಗಳ ಮೌಖಿಕ ಆದೇಶ ಇತ್ತು. ತಕ್ಷೀರು ನಡೆದ ದಿನ ಕಾರ್ಕಳಕ್ಕೆ ಬಂದು ತಾಲೂಕು ಕಛೇರಿ ಬಳಿಗೆ ಹೋದೆವಾ ಎಂದು ನೆನಪಿಲ್ಲ. ತಕ್ಷೀರು ನಡೆದ ದಿನ ತಕ್ಷೀರಿಗೆ ಸಂಬಂಧಿಸಿದ ವಾಹನದಲ್ಲಿ ಮರಳು ಸಾಗಟ ಮಾಡುತ್ತಿದ್ದ ಬಗ್ಗೆ ಮೊದಲು ಮಾಹಿತಿ ಬಂದಿರುವುದಿಲ್ಲ. ಸರ್ವಜ್ಞ ನಗರವನ್ನು ದಾಟಿಯೇ ತಕ್ಷೀರು ಸ್ಥಳಕ್ಕೆ ಹೋಗಬೇಕು. ತಕ್ಷೀರು ಸ್ಥಳ ಜನ ನಿಬಿಡ ಪ್ರದೇಶ ಎಂದರೆ ಬೆಳಗಿನ ಜಾವ ಆದ ಕಾರಣ ಜನ ತುಂಬಾ ಇರಲಿಲ್ಲ. ವಿರಳವಾಗಿ ವಾಹನಗಳು ಓಡಾಡುತ್ತಿದ್ದವು. ನಾನು ವಾಹನವನ್ನು ನಿಲ್ಲಿಸಲು ಸೂಚನೆ ನೀಡುವ ಮೊದಲೇ ಆರೋಪಿತರು ವಾಹನವನ್ನು ನಿಲ್ಲಿಸಲು ಪ್ರಯತ್ನಿಸಿರುವುದಿಲ್ಲ. ಓಡಿ ಹೋದ 2 ನೇ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ರಸ್ತೆ ಮಾರ್ಗವಾದರಿಂದ ಹಿಡಿಯಲು ಸಾಧ್ಯವಾಗಿರುವುದಿಲ್ಲ. ಎಷ್ಟು ದೂರ ಬೆನ್ನಟಿರುತ್ತೇವೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ತಕ್ಷೀರು ನಡೆದ ದಿನ ನಾನು, ಚಾಸಾ 2 ಮತ್ತು 3 ಅಲ್ಲದೇ ಇಲಾಖಾ ವಾಹನದ ಚಾಲಕ ಕೂಡ ಇದ್ದರು. ವಾಹನದಲ್ಲಿ ಇದ್ದ ಇನ್ನೊಬ್ಬ ವ್ಯಕ್ತಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ವಾಹನದ ದಾಖಲೆಗಳನ್ನು ಕೇಳಿದ್ದು ಇಲ್ಲ ಎಂದು ತಿಳಿಸಿರುತ್ತಾರೆ. 1 ನೇ ಆರೋಪಿಯನ್ನು ವಿಚಾರಿಸಿದಾಗ ವಾಹನದ ಮಾಲೀಕ ಯಾರು ಎಂದು ಚಾಲಕನಿಗೆ ತಿಳಿದಿದೆ ಎಂದು ಹೇಳಿರುತ್ತಾರೆ.

ಚಾಸಾ 4 ಕಾರ್ಕಳ ಕಸಬ ಗ್ರಾಮದ ಭುವನೇಂದ್ರ ಕಾಲೇಜು ನಿವಾಸಿ ಎಂದು ಕಂಡು ಬರುತ್ತದೆ. ಚಾಸಾ 4 ರವರ ಮನೆ ತಕ್ಷೀರು ಸ್ಥಳದಿಂದ 5 ಕಿ ಮೀ ದೂರ ಇದೆ. ಚಾಸಾ 5 ರವರು ತೆಳ್ಳಾರು ಗ್ರಾಮದ ದುರ್ಗಾ ನಿವಾಸಿ. ಚಾಸಾ 5 ರವರ ಮನೆ ತಕ್ಷೀರು ಸ್ಥಳದಿಂದ 8 ಕಿ ಮೀ ದೂರ ಇದೆ ಎಂದರೆ ಇರಬಹುದು. ಪಂಚರಾಗಿ ಬರುವಂತೆ ಚಾಸಾ 4 ಮತ್ತು 5 ರವರಿಗೆ ನೋಟಿಸು ನೀಡಿರುತ್ತೇವೆ. ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸರಿ. ಚಾಸಾ 4 ಮತ್ತು 5 ರವರನ್ನು ನಮ್ಮ ಸಿಬ್ಬಂಧಿಗಳು ಕರೆದುಕೊಂಡು ಬಂದಿರುತ್ತಾರೆ. ಚಾಸಾ 4 ಮತ್ತು

5 ರವರನ್ನು ಸರ್ವಜ್ಞ ನಗರದಿಂದ ಕರೆದುಕೊಂಡು ಬಂದಿರುತ್ತಾರೆ. ನಿಪಿ-3 ಭಾವಚಿತ್ರವನ್ನು ಸಿಬ್ಬಂದಿಗಳ  ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಯಾರು ತೆಗೆದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಠಾಣೆಯಲ್ಲಿ ಪ್ರಿಂಟ್ ತೆಗೆದಿರುತ್ತೇವೆ. 3 ಯುನಿಟ್ ಮರಳು ಎಂದು ಅಂದಾಜಿನಲ್ಲಿ ಹೇಳುತ್ತಿದ್ದೇವೆ. ಪಂಚರು ಅಂದಾಜಿನಲ್ಲಿ ಮರಳಿನ ಮೌಲ್ಯ ತಿಳಿಸಿರುತ್ತಾರೆ. ಚಾಸಾ 4 ಮತ್ತು 5 ಚಾಲಕರಾಗಿರುತ್ತಾರೆ. ನಿಶಾನೆಕರಿಸಿದ ಭಾವಚಿತ್ರದಲ್ಲಿ ಇಲಾಖಾ ಜೀಪು ಕಂಡು ಬರುವುದಿಲ್ಲ ಎಂದರೆ ಸರಿ. ಲಾರಿಯಲ್ಲಿದ್ದ ವ್ಯಕ್ತಿಯ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. 3 ಯುನಿಟ್ ಮರಳು ಆಗತಾನೇ ತೆಗೆದ ಮರಳಾಗಿರುತ್ತದೆ. ಸದರಿ ಮರಳನ್ನು ತುಂಬಿಸಲು 4 ಜನ ಬೇಕು ಎಂದರೆ ಎಷ್ಟು ಜನ ಬೇಕಾದರು ತುಂಬಿಸಬಹುದು. ಮರಳನ್ನು ತುಂಬಿಸಲು ಬೇರೆ ಯಾರು ಸಹಕರಿಸಿರುತ್ತಾರೆ ಎಂದು ನಮಗೆ ತಿಳಿದು ಬಂದಿರುವುದಿಲ್ಲ. ಮಹಜರು ಮಾಡುವ ಪೂರ್ವದಲ್ಲಿ ಪ್ರ ವ ವರದಿಯನ್ನು ತಯಾರಿಸಲು ಠಾಣೆಗೆ ಕರೆ ಮಾಡಿ ತಿಳಿಸಿರುವುದಿಲ್ಲ. ಈ ಪ್ರಕರಣದಲ್ಲಿ ಪ್ರ ವ ವರದಿಯನ್ನು ದಾಖಲಿಸುವ ಪೂರ್ವದಲ್ಲಿಯೇ ಸ್ವತ್ತು ಸ್ವಾಧೀನತಾ ಮಹಜರು ಮಾಡಿರುತ್ತೇವೆ. ಪ್ರ ವ ವರದಿಯನ್ನು ತಕ್ಷೀರು ಸ್ಥಳದಲ್ಲಿ ತಯಾರಿಸಿರುವುದಿಲ್ಲ. ಇದೆಲ್ಲಾ ಪ್ರಕ್ರಿಯೆಗಳನ್ನು ಸಾರ್ವಜನಿಕರು ನೋಡಿರುತ್ತಾರೆ. ತಕ್ಷೀರು ಸ್ಥಳದ ಸಾರ್ವಜನಿಕರನ್ನು ಮಹಜರಿಗೆ ಪಂಚರಾಗಿ ಮಾಡಿರುವುದಿಲ್ಲ ಎಂದರೆ ಲಭ್ಯ ಇರಲಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ